ನೀಲಿ ನರಿ

✍️ಶ್ರೀವಲ್ಲಿ ರೈ ಮಾರ್ಟೆಲ್



ಒಂದಾನೊಂದು ಕಾಲದಲ್ಲಿ, ಹಸಿದ ನರಿಯೊಂದು ಕೋಳಿ ಕದಿಯಲು ಊರೊಳಗೆ ನುಗ್ಗಿತು. ಮನೆಯ ನಾಯಿಗಳು ಅದನ್ನು ನೋಡಿ ಬೆನ್ನಟ್ಟಿದಾಗ, ಜೀವ ಉಳಿಸಿಕೊಳ್ಳಲು ಓಡಿದ ನರಿ ಕತ್ತಲೆಯಲ್ಲಿ ನೇಕಾರನ ಮನೆಯ ನೀಲಿ ಬಣ್ಣದ ಗುಂಡಿಗೆ ಬಿದ್ದಿತು. ನಾಯಿಗಳು ದಾರಿ ತಪ್ಪಿ ಹೋದವು.
ನರಿ ಗುಂಡಿಯಿಂದ ಎದ್ದು ಕಾಡಿಗೆ ಮರಳಿದಾಗ, ಅದರ ಮೈಯೆಲ್ಲಾ ನೀಲಿ ಬಣ್ಣವಾಗಿತ್ತು. ವಿಚಿತ್ರ ರೂಪದ ಆ ಪ್ರಾಣಿಯನ್ನು ನೋಡಿ ಕಾಡಿನ ಮೃಗಗಳು ಹೆದರಿ ಓಡಿದವು. ಪ್ರಾಣಿಗಳು ತನ್ನನ್ನು ಗುರುತಿಸುತ್ತಿಲ್ಲ ಎಂದು ಅರಿತ ನರಿ, "ನಿಮ್ಮನ್ನು ರಕ್ಷಿಸಲು ದೇವರು ನನ್ನನ್ನು ಮೇಲಿನ ಲೋಕದಿಂದ ಕಳುಹಿಸಿದ್ದಾನೆ, ನನ್ನ ಹೆಸರು ಕುಕುದ್ರೂಮ" ಎಂದು ಸುಳ್ಳು ಹೇಳಿ ಕಾಡಿನ ರಾಜನಾಯಿತು.
ಪ್ರಾಣಿಗಳೆಲ್ಲಾ ಅದನ್ನು ಒಪ್ಪಿಕೊಂಡವು. ನೀಲಿ ನರಿಯು ಸಿಂಹನನ್ನು ತನ್ನ ಸೇವಕನನ್ನಾಗಿ, ಹುಲಿಯನ್ನು ದಳಪತಿಯನ್ನಾಗಿ ಮತ್ತು ಆನೆಯನ್ನು ದ್ವಾರಪಾಲಕನನ್ನಾಗಿ ಮಾಡಿಕೊಂಡಿತು. ತನ್ನ ಅಸಲಿಯತ್ತು ಬಯಲಾಗಬಾರದೆಂದು ತನ್ನದೇ ಜಾತಿಯ ನರಿಗಳನ್ನು ಕಾಡಿನಿಂದ ದೂರ ಓಡಿಸಿತು. ಪ್ರಾಣಿಗಳು ತಂದುಕೊಡುತ್ತಿದ್ದ ಮಾಂಸ, ಜೇನುತುಪ್ಪ, ಹಣ್ಣುಗಳನ್ನು ತಿನ್ನುತ್ತಾ ನರಿ ವೈಭವದ ಜೀವನ ನಡೆಸತೊಡಗಿತು.
ಹೀಗಿರುವಾಗ ಒಂದು ದಿನ ಹುಣ್ಣಿಮೆಯ ರಾತ್ರಿ ಬಂದಿತು. ಚಂದ್ರನ ಬೆಳಕಿನಲ್ಲಿ ದೂರದಿಂದ ನರಿಗಳ ಹಿಂಡು ಒಟ್ಟಿಗೆ ಕೂಗಲಾರಂಭಿಸಿತು. ಆ ಧ್ವನಿಯನ್ನು ಕೇಳಿದ ನೀಲಿ ನರಿ ತನ್ನ ರಾಜನ ಸ್ಥಾನವನ್ನು ಮರೆತು, ಜನ್ಮಜಾತ ಸ್ವಭಾವದಂತೆ ತಾನೂ ಸಹ ಜೋರಾಗಿ "ಉಕ್ಕ, ಉಕ್ಕ, ಊವಾ." ಎಂದು ಕೂಗಿತು.
ಅದರ ಕೂಗನ್ನು ಕೇಳಿದ ತಕ್ಷಣವೇ ಕಾಡಿನ ಪ್ರಾಣಿಗಳಿಗೆ ತಾವು ಮೋಸಹೋಗಿರುವುದು ತಿಳಿಯಿತು. ನರಿಗೆ ತಪ್ಪು ತಿಳಿಯುವಷ್ಟರಲ್ಲಿ ಕಾಲ ಮಿಂಚಿತ್ತು. ಸಿಂಹ ಮತ್ತು ಆನೆಗಳು ತಕ್ಷಣವೇ ಅದರ ಮೇಲೆರಗಿ ಅದನ್ನು ಕೊಂದು ಹಾಕಿದವು. ಅಲ್ಲಿಗೆ ನರಿಯ ಸುಳ್ಳಿನ ಕಥೆ ಮುಗಿಯಿತು.

ಕಥೆಯ ನೀತಿ:

ನಾವು ನಾವಾಗಿಯೇ ಇರಬೇಕು. ನಾವು ಏನಾಗಿದ್ದೇವೋ ಅದರ ಬಗ್ಗೆ ನಮಗೆ ಹೆಮ್ಮೆಯಿರಬೇಕು. ಅದರಲ್ಲೇ ನಮ್ಮ ಸುಖ, ಮನಃಶಾಂತಿ ಮತ್ತು ನೆಮ್ಮದಿ ಇರುತ್ತದೆ. ಯಾರೋ ಆಗಿ ನಟಿಸಿ ಎಷ್ಟು ದಿನ ಬದುಕಲು ಸಾಧ್ಯ? ಬಂಗಾರದ ಲೇಪ ಹಾಕಿದ ಹಿತ್ತಾಳೆ ಕೆಲವೇ ದಿನ ಹೊಳೆಯಬಹುದು. ಮನುಷ್ಯನ ಅಸಲಿ ಗುಣ (ಹಿತ್ತಾಳೆ ಗುಣ) ಒಮ್ಮೆ ಹೊರಬಿದ್ದರೆ, ಜೀವನವೇ ನಾಶವಾಗುತ್ತದೆ. ಹಿತ್ತಾಳೆಗೆ ಹಿತ್ತಾಳೆಯದ್ದೇ ಆದ ಮರ್ಯಾದೆ ಇರುತ್ತದೆ.